


ಗೋಪಾಲಕೃಷ್ಣ ಪೈ



ನಾಡಪ್ರಭು ಕೆಂಪೇಗೌಡ ನಿಲ್ದಾಣದ ಗಿಜಿಗಿಜಿಗುಡುವ ಜನಸಂದಣಿಯ ಜೊತೆ ಅವಳು ಸಂಜೆಯ ಆರೂ ನಲ್ವತ್ತೆರಡರ ಬೋಗಿ ಏರಿದ್ದು.

ಶ್ರೀರಾಂಪುರಕ್ಕೆ ಹೋಗಲು ಜಯನಗರ ನಿಲ್ದಾಣದಲ್ಲಿ ಹತ್ತಿದ್ದ ನಾನು ಸಿಕ್ಕಿದ ಸೀಟಿನಲ್ಲಿ ಕೂತಿದ್ದೆ. ಆಗ ಸಾಕಷ್ಟು ಖಾಲಿಯಿದ್ದ ಬೋಗಿ ನಾಡಪ್ರಭು ಕೆಂಪೇಗೌಡ ನಿಲ್ದಾಣಕ್ಕೆ ಬಂದದ್ದೇ ಒಮ್ಮೆಲೇ ಪ್ರಯಾಣಿಕರಿಂದ ಕಿಕ್ಕಿರಿದು ಹೋಯಿತು. ಎಲ್ಲರೂ ತಮ್ಮ ತಮ್ಮ ಆಫೀಸ್ ಕೆಲಸ ಮುಗಿಸಿ ಮನೆಗೆ ಹೋಗುವವರು. ನನ್ನೆದುರು ಇಬ್ಬರು ದೊಡ್ಡ ಹೊಟ್ಟೆಯ ದಡಿಯ ವಯಸ್ಕರು ಬಂದು ನಿಂತರು. ಅವರಲ್ಲೊಬ್ಬನ ಬಳಿ ಸಾಮಾನುಗಳಿಂದ ತುಂಬಿದ ಒಂದು ದೊಡ್ಡ ಚೀಲವಿತ್ತು. ಅದನ್ನವನು ತನ್ನ ಕಾಲುಗಳ ನಡುವೆ ಇರುಕಿಸಿಕೊಂಡಿದ್ದ. ಇನ್ನೊಬ್ಬ ಬಹುಶಃ ಸರಕಾರಿ ನೌಕರ. ಕಡುಕೆಂಪು ಟೆರಿಕಾಟ್ ಶರಟಿನ ಒಳಗೆ ಸಾಕಷ್ಟು ಅಗಲವಾದ ಹೊಟ್ಟೆಯ ಮೇಲೆ ಯಾರ ದೃಷ್ಟಿಯೂ ಬೀಳಬಾರದೆನ್ನುವ ಹಾಗೆ ಬಿಗಿಯಾಗಿ ಬೆಲ್ಟ್ ಹಾಕಿದ ಪ್ಯಾಂಟ್ ಧರಿಸಿದ್ದ. ಎದೆಯ ಹತ್ತಿರ ಜೇಬಿನಲ್ಲಿ ಒಂದು ಚಿಕ್ಕ ಡೈರಿ ಮತ್ತು ಪೆನ್.

ನನ್ನ ಪಕ್ಕದಲ್ಲಿ ಒಂದು ಎಳೆಯ ಜೋಡಿ ಕೂತಿತ್ತು. ಶ್ರೀರಾಂಪುರಕ್ಕೆ ಹೋಗಲು ನಾನು ಜಯನಗರದಲ್ಲಿ ಹತ್ತಿದಾಗಿನಿಂದಲೂ ಆ ಹುಡುಗ ಅವಳ ಕೈಯನ್ನು ಭದ್ರವಾಗಿ ಹಿಡಿದುಕೊಂಡು ಕೂತಿರುವುದನ್ನು ನಾನು ಗಮನಿಸಿದ್ದೆ. ಕಣ್ಣುಗಳ ರೆಪ್ಪೆಯನ್ನೂ ಅಲುಗಾಡಿಸದೆ ಆಕೆ ನೆಟ್ಟ ದೃಷ್ಟಿಯಿಂದ ಕೆಳಗಡೆ